**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**
**<u>ದಂಡಾಧಿಕಾರಿಗಳವರ ನ್ಯಾಯಾಲಯ, ಬಂಗಾರಪೇಟೆ .</u>**

<u>ದಿನಾಂಕ **08** ನೇ ನವೆಂಬರ್ - **2022**</u>

**- ಉಪಸ್ಥಿತರು -**

**ಶ್ರೀ.ಬಿ.ಕೇಶವಮೂರ್ತಿ, ಬಿ.ಎ., ಎಲ್ಎಲ್.ಬಿ.,**
**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು ಬಂಗಾರಪೇಟೆ.**

**<u>ಅಸಲು ದಾವೆ ಸಂಖ್ಯೆ: 83/2020</u>**

**ಮಧ್ಯಂತರ ಅರ್ಜಿ - 1**

| | |
|---|---|
| <u>ಅರ್ಜಿದಾರರು/</u><br>ವಾದಿ | ಶ್ರೀ ಜಿ.ಪಿ.ಕಮಲಾಕ್ಷ ,<br>ಬಿನ್ ಲೇಟ್ ಪಾಪಣ್ಣ.ಟಿ<br>ವರ್ಷಃ 40 ವರ್ಷ<br>ವಾಸಃ ವಾರ್ಡ್ ಸಂಖ್ಯೆ 13, ಪೇಟೆಚಾಮನಹಳ್ಳಿ<br>ಕೋಲಾರ ತಾಲ್ಲೂಕು.<br><br>(ವಾದಿ ಪರವಾಗಿ ಶ್ರೀ ಎಚ್.ಎಂ.ವಿ ವಕೀಲರು) |
| | **- ವಿರುದ್ಧ -** |
| <u>ಎದುರುದಾರರು/</u><br><u>ಪ್ರತಿವಾದಿಗಳು</u> | 1) ಶ್ರೀನಿವಾಸಯ್ಯ.ಎಂ,<br>ಬಿನ್ ಲೇಟ್ ಮುನಿನಾಗಪ್ಪ,<br>ವರ್ಷಃ 76 ವರ್ಷ,<br>ವಾಸಃ ಅನಿಗಾನಹಳ್ಳಿ ಗ್ರಾಮ,<br>ಹಂಚಾಳ ಗೇಟ್ ,<br>ಹುದುಕುಳ ಪೋಸ್ಟ್ , ಕಸಬಾ ಹೋಬಳಿ,<br>ಬಂಗಾರಪೇಟೆ ತಾಲ್ಲೂಕು.<br><br>ಮತ್ತು ಇತರರು<br>(ಪ್ರತಿವಾದಿ **1** ಮತ್ತು **2** ರವರ ಪರವಾಗಿ ಶ್ರೀ ಎಂ.ಡಿ.ಆರ್ ವಕೀಲರು ಮತ್ತು ಪ್ರತಿವಾದಿ **3** ರಿಂದ **6** ರವರ ಪರವಾಗಿ ಎಂ.ಎಂ.ಎನ್ ವಕೀಲರು) |

## ಮಧ್ಯಂತರ ಅರ್ಜಿ 1 ರ ಮೇಲೆ ಆದೇಶ ಃ

ವಾದಿಯು ಮಧ್ಯಂತರ ಅರ್ಜಿ 1 ನ್ನು ಸಿ.ಪ್ರ.ಸಂ. ಕ್ರಮಾದೇಶ 39 ನಿಯಮ 1 ಮತ್ತು 2 ರಂತೆ ಸಲ್ಲಿಸಿ ದಾವಾ ಶೆಡ್ಯೂಲ್ ಸ್ವತ್ತುವಿನ ವಾದಿ/ಅರ್ಜಿದಾರ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿ ಆಂತಕ ಉಂಟು ಮಾಡದಂತೆ ಮತ್ತು ಸದರಿ ಸ್ವತ್ತಿನಲ್ಲಿರುವ ಕಲ್ಲು ಕಂಬಗಳನ್ನು ತೆರವು ಗೊಳಿಸದಂತೆ ಪ್ರತಿವಾದಿಯರನ್ನು ಹಂಗಾಮಿ ಪ್ರತಿಬಂಧಕಾಜ್ಞೆ ಆದೇಶದ ಮೂಲಕ ನಿರ್ಭಂದಿಸಬೇಕೆಂದು ಪರಿಹಾರ ಕೋರಿ ಸಲ್ಲಿಸಿರುತ್ತಾರೆ.

2) ವಾದಿಯು ತಮ್ಮ ವಾದಪತ್ರ ಮತ್ತು ಪ್ರಮಾಣ ಪತ್ರದಲ್ಲಿ ದಾವಾಸರ್ವೇನಂಬರ್ 101/2 ರ ಸ್ವತ್ತುಗಳು ಮೂಲತಃ 1 ನೇ ಪ್ರತಿವಾದಿ ಮತ್ತು ಅವರ ಸಹೋದರ ಎಂ.ಆಂಜನಪ್ಪರವರಿಗೆ ಸೇರಿದೆ ಎಂದು, ಸದರಿ ಸಹೋದರರು ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಾಗ ದಾವಾ ಸ್ವತ್ತು 1 ನೇ ಪ್ರತಿವಾದಿಯ ಸಹೋದರ ಎಂ.ಆಂಜನಪ್ಪರವರಿಗೆ ಬಂದಿರುವುದಾಗಿ, ಸದರಿ ಆಂಜನಪ್ಪ ಮತ್ತು ಅವರ ಪತ್ನಿ ಹಾಗೂ ಮಕ್ಕಳು ದಾವಾ ಸ್ವತ್ತನ್ನು ದಿನಾಂಕ 03.08.2017 ರ ನೊಂದಾಯಿತ ದಾನಪತ್ರದ ಮುಖಾಂತರ ವಾದಿಗೆ ಹಸ್ತಾಂತರ ಮಾಡಿರುವುದಾಗಿ ಈ ಮೂಲಕ ವಾದಿ ದಾವಾ ಸ್ವತ್ತಿನ ಮಾಲೀಕರಾಗಿ ಸ್ವಾಧೀನ ಹೊಂದಿದ್ದು, ವಾದಿಯ ಸ್ವಾಧೀನಕ್ಕೆ ಪ್ರತಿವಾದಿಗಳು ಅಡಚಣೆ ಉಂಟು ಮಾಡುತ್ತಿರುವುದರಿಂದ ಈ ದಾವೆ ಬಂದಿರುವುದಾಗಿ, ಈಗ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿರುವ ಕಲ್ಲು ಕಂಬಗಳನ್ನು ತೆರುವುಗೊಳಿಸಲು ಪ್ರಯತ್ನ ಪಡುತ್ತಿರುವುದರಿಂದ ಮತ್ತು ವಾದಿಯ ದಾವಾ ಸ್ವತ್ತಿನ ಸ್ವಾಧೀನಕ್ಕೆ ನಿರಂತರವಾಗಿ ಅಡಚಣೆ ಉಂಟು ಮಾಡುತ್ತಿರುವುದರಿಂದ ನ್ಯಾಯಾಲಯ ತಾತ್ಕಲಿಕ ನಿರ್ಬಂಧಕಾಜ್ಞೆ ಆದೇಶ ಹೊರಡಿಸದಿದ್ದಲ್ಲಿ ಪ್ರತಿವಾದಿಗಳು ವಾದಿಯನ್ನು ದಾವಾ ಸ್ವತ್ತಿನಿಂದ ಹೊರ ಹಾಕುತ್ತಾರೆ ಎಂದು ಆ ಕಾರಣ ಮಧ್ಯಂತರ ಅರ್ಜಿ 1 ರ ಮೇಲೆ ಆದೇಶ ತುರ್ತು ಮತ್ತು ಅವಶ್ಯಕ ಎಂದು ಪ್ರತಿವಾಪಾದಿಸುತ್ತಾರೆ.

3) ಮಧ್ಯಂತರ ಅರ್ಜಿ.1 ಕ್ಕೆ ಪ್ರತಿವಾದಿಗಳು ತಕರಾರು ಸಲ್ಲಿಸಿರುವುದಿಲ್ಲ ಬದಲಾಗಿ ಪ್ರತಿವಾದ ಪತ್ರಗಳನ್ನು ಮಧ್ಯಂತರ ಅರ್ಜಿ.1 ಕ್ಕೆ ತಕರಾರು ಎಂದು ಪರಿಗಣಿಸಲು ಕೋರಿದ್ದು ಅನುಮತಿ ನೀಡಲಾಗಿದೆ.

4) ಪ್ರತಿವಾದಿ 1 ಮತ್ತು 2 ರವರು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯ ವಾದ ಪತ್ರದ ಅಂಶಗಳನ್ನು ಅಲ್ಲಗೆಳೆಯುತ್ತಾರೆ, ಮುಂದುವರೆದು ದಾವಾ ಸ್ವತ್ತು ಪ್ರತಿವಾದಿಗಳ ಒಟ್ಟು ಕುಟುಂಬಕ್ಕೆ ಸೇರಿದ ಸ್ವತ್ತು ಎಂದು, ಸದರಿ ಸ್ವತ್ತು ಇದುವರೆಗೂ ವಿಭಾಗವಾಗಿ ಯಾರಿಗೂ

ಹೋಗಿರುವುದಿಲ್ಲವೆಂದು ಸದರಿ ಸ್ವತ್ತು ಒಟ್ಟು ಕುಟುಂಬದ ಸ್ವತ್ತುವಾಗಿಯೇ ಉಳಿದಿರುತ್ತದೆ ಎಂದು, ದಾವಾ ಸ್ವತ್ತು ಮತ್ತು ಇನ್ನಿತರ ಕುಟುದಬ ಸ್ವತ್ತುಗಳ ಸಂಬಂಧ ಪ್ರತಿವಾದಿ 3 ರಿಂದ 6 ರವರು ಅಸಲು ದಾವಾ ಸಂಖ್ಯೆ 79/2020 ನ್ನು ವಿಭಾಗಾಂಶ ಪರಿಹಾರ ಕೋರಿ ಸಲ್ಲಿಸಿದ್ದು ಸದರಿ ದಾವೆಯು ಚಾಲ್ತಿಯಲ್ಲಿರುವುದಾಗಿ, ವಾದಿಗಳು ದಾವಾ ಸ್ವತ್ತಿಗೆ ಯಾವುದೇ ಸಂಬಂಧ ಇರುವುದಿಲ್ಲವೆಂದು, ವಾದಿ ಅಕ್ರಮ ದಾಖಲಾತಿಗಳನ್ನು ಸೃಷ್ಟಿಸಿ ಈ ದಾವೆ ತಂದಿರುವುದಾಗಿ ಆ ಕಾರಣ ದಾವೆಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

5) ಉಭಯಪಕ್ಷಕಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6) ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆಃ

**ಃಃ ಅಂಶಗಳು ಃಃ**

1 ವಾದಿ/ ಅರ್ಜಿದಾರರು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಹೊರಡಿಸಲು ಅವಶ್ಯಕವಾಗಿರುವ ಮೇಲ್ನೋಟಕ್ಕೆ ಕಾಣುವಂತೆ ಈ ಪ್ರಕರಣ ಇದೇ ಎಂದು ತೋರ್ಪಪಡಿಸುವರೇ ?

2 ವಾದಿ/ ಅರ್ಜಿದಾರರು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಹೊರಡಿಸಲು ಅವಶ್ಯಕವಾಗಿರುವ ಅನುಕೂಲತೆಯ ತುಲನೆ ತಮ್ಮ ಪರವಾಗಿದೆ ಎಂದು ತೋರ್ಪಪಡಿಸುವರೇ?

3 ವಾದಿ/ ಅರ್ಜಿದಾರರು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಹೊರಡಿಸದಿದ್ದಲ್ಲಿ ತಮ್ಮ ಪರವಾಗಿ ಸರಿಪಡಿಸಲಾಗದ ನಷ್ಟ ಉಂಟಾಗುತ್ತದೆಂದು ತೋರ್ಪಪಡಿಸುವರೇ ?

4 ಯಾವ ಆದೇಶ ಅಥವಾ ಪರಿಹಾರ ?

7) ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದ.

| | | |
|---|---|---|
| ಅಂಶ-1 | ಃ | ಸಕಾರಾತ್ಮಕವಾಗಿ. |
| ಅಂಶ-2 | ಃ | ಸಕಾರಾತ್ಮಕವಾಗಿ. |
| ಅಂಶ-3 | ಃ | ಸಕಾರಾತ್ಮಕವಾಗಿ. |
| ಅಂಶ-4 | ಃ | ಅಂತಿಮ ಆದೇಶದಂತೆ |

**:: ಕಾರಣಗಳು ::**

8) **ಅಂಶ-1 ರಿಂದ 3 :-** ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರ ಕೋರಿ ಹೂಡಿರುತ್ತಾರೆ. ವಾದಿಯು ತಮ್ಮ ವಾದಪತ್ರ ಮತ್ತು ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತನ್ನು ದಿನಾಂಕ 03.08.2017 ರ ದಾನ ಪತ್ರದ ಮುಖಾಂತರ ಪಡೆದಿರುವುದಾಗಿ ಪ್ರತಿಪಾದಿಸಿರುತ್ತಾರೆ. ವಾದಿಯ ಪರವಾಗಿ ದಾನಪತ್ರ ಬರೆದುಕೊಟ್ಟ ಎಂ ಆಂಜನಪ್ಪರವರು ಈ ಪ್ರಕರಣದ 1 ನೇ ಪ್ರತಿವಾದಿಯ ಸಹೋದರ ಆಗಿರುತ್ತಾರೆ. ಈ ಪ್ರಕರಣದಲ್ಲಿ ಈಗಾಗಲೇ ಗುರುತಿಸಿರುವ ನಿಪಿ -12 ವಿಭಾಗ ಪತ್ರವನ್ನು ಪರಿಶೀಲಿಸಿದಾಗ ಈ ದಾವಾ ಸ್ವತ್ತಿಗೆ ಸಂಬಂಧಪಟ್ಟ ಸರ್ವೇನಂಬರ್ 101 ಸ್ವತ್ತು 1 ನೇ ಪ್ರತಿವಾದಿಯ ಸಹೋದರ ಆಂಜನಪ್ಪರವರ ವಿಭಾಗಕ್ಕೆ ಬಂದಿರುವುದು ಕಂಡು ಬರುತ್ತದೆ. ಅಂದರೆ ವಾದಿಯು ತನ್ನ ವಾದಪತ್ರದ ಪ್ಯಾರಾ 3 ರಲ್ಲಿರುವ ಅಂಶಗಳು ಮೇಲ್ನೋಟಕ್ಕೆ ಸತ್ಯವಾಗಿರುತ್ತದೆ ಎಂದು ಕಂಡುಬರುತ್ತದೆ. 1 ನೇ ಪ್ರತಿವಾದಿಯ ಸಹೋದರ ತಮ್ಮ ಭಾಗಾಂಶಕ್ಕೆ ಬಂದ ಸ್ವತ್ತುವಿನಲ್ಲಿ 5.04 ಗುಂಟೆ ಜಾಗವನ್ನು ವಾದಿಗೆ ದಾನಪತ್ರದ ಮುಖಾಂತರ ಹಸ್ತಾಂತರ ಮಾಡಿರುತ್ತಾರೆ ವಾದಿಯು ಪ್ರತಿವಾದಿಗಳ ಕುಟುಂಬಕ್ಕೆ ಸೇರಿರದ ವ್ಯಕ್ತಿಯಾಗಿರುವುದಿಲ್ಲ, ವಾದಿಯು 1 ನೇ ಪ್ರತಿವಾದಿಯ ಸಹೋದರಿಯ ಮಗನಾಗಿರುತ್ತಾನೆ. ಆದ್ದರಿಂದ ಸದರಿ ದಾನಪತ್ರದ ಅಂಶಗಳನ್ನು ಈ ಹಂತದಲ್ಲಿ ಅಲ್ಲಗೆಳೆಯುವುದು ಸೂಕ್ತವಾಗಿರುವುದಿಲ್ಲ , ಸದರಿ ದಾನಪತ್ತದಂತೆ ದಾವಾ ಸ್ವತ್ತು ವಾದಿಯ ಸ್ವಾಧೀನಕ್ಕೆ ಬಂದಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಈ ಪ್ರಕರಣದ ಪ್ರತಿವಾದಿ 3 ರಿಂದ 6 ರವರು ಅಸಲು ದಾವಾ ಸಂಖ್ಯೆ 83/2020 ರ ಪ್ರಕರಣವನ್ನು ತಮ್ಮ ತಂದೆ ಅಂದರೆ ಈ ಪ್ರರಕಣದ 1 ನೇ ಪ್ರತಿವಾದಿ ಮತ್ತು ಇತರರ ವಿರುದ್ಧ ಸಲ್ಲಿಸಿರುತ್ತಾರೆ. ಸದರಿ ದಾವೆ ಬಾಕಿ ಇರುತ್ತದೆ ಎಂಬ ಕಾರಣಕ್ಕೆ ವಾದಿಯ ದಾವಾ ಸ್ವತ್ತಿನ ಹಕ್ಕನ್ನು ಅಲ್ಲಗೆಳೆಯುವುದು ಸೂಕ್ತ ಎಂದು ಕಂಡುಬರುತ್ತಿರುವುದಿಲ್ಲ, ದಾವಾ ಸ್ವತ್ತು ಮತ್ತು ಕುಟುಂಬದ ಇತರ ಸ್ವತ್ತುಗಳನ್ನು ಈ ಪ್ರಕರಣದ 1 ನೇ ಪ್ರತಿವಾದಿ ಮತ್ತು ಅವರ ಸಹೋದರ ಈಗಾಗಲೇ ನಿಪಿ -12 ರ ವಿಭಾಗ ಪತ್ರದಂತೆ ವಿಭಾಗ ಮಾಡಿಕೊಂಡಿರುವುದರಿಂದ ಸದರಿ ವಿಭಾಗಾಂಶದ ದಾವೆಯ ನೈಜತೆಯ ಬಗ್ಗೆ

ಸಂಶಯ ಮೂಡುತ್ತದೆ. ವಾದಿ ಪರ ಹಾಜರುಪಡಿಸಿರುವ ದಾನಪತ್ರ, ವಿಭಾಗ ಪತ್ರ, ಮ್ಯೂಟೇಶನ್ ರಿಜಿಸ್ಟರ್ ಮತ್ತು ಪಹಣಿ ಪತ್ರಿಕೆಗಳಲ್ಲಿ ವಾದಿಯ ಹೆಸರು ಮೇಲ್ಕಂಡ ದಾನಪತ್ರಕ್ಕೆ ಅನುಗುಣವಾಗಿ ನಮೂದಾಗಿರುವುದು ಕಂಡುಬರುತ್ತದೆ ಈ ಎಲ್ಲಾ ದಾಖಲಾತಿಗಳು ವಾದಿಯು ಈ ದಾವಾ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆಂಬದನ್ನು ಮೇಲ್ನೋಟಕ್ಕೆ ತೋರ್ಪಡಿಸುತ್ತದೆ.

ಈ ಹಂತದಲ್ಲಿ ಮೇಲ್ನೋಟಕ್ಕೆ ವಾದಿ ದಾವಾ ಸ್ವತ್ತುವಿನ ಸ್ವಾಧೀನದಾರರು ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಮತ್ತು ಹಿತ್ತಾಸಕ್ತಿ ಉಳಿದಿರುವ ಬಗ್ಗೆ ಈ ಹಂತದಲ್ಲಿ ಯಾವುದೇ ಸಾಕ್ಷ್ಯ ಕಂಡುಬರುತ್ತಿಲ್ಲ. ಮುಂದುವರೆದು ಪ್ರತಿವಾದಿಗಳಿಗೆ ದಾವಾಸ್ವತ್ತಿನಲ್ಲಿ ಭಾಗಂಶ ಹಕ್ಕು ಇರುತ್ತದೆ ಎಂಬುದಕ್ಕೂ ಪೂರಕ ಸಾಕ್ಷ್ಯ ಇರುವುದಿಲ್ಲ, ವಾದಿ ದಾವಾ ಸ್ವತ್ತಿನ ಸ್ವಾದೀನಕ್ಕೆ ಪ್ರತಿವಾದಿಗಳು ನಿರಂತರವಾಗಿ ಅಡಚಣೆ ಉಂಟು ಮಾಡುತ್ತಿರುವುದಾಗಿ ಪ್ರತಿಪಾದಿಸುತ್ತಾರೆ . ಸದರಿ ಅಡಚಣೆಯನ್ನು ನಿರ್ಬಂಧಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ ಎಲ್ಲಾ ಅಂಶಗಳನ್ನು ಪರಿಗಣಿಸಿ ಈ ಹಂತದಲ್ಲಿ ವಾದಿ/ ಅರ್ಜಿದಾರರು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಹೊರಡಿಸಲು ಅವಶ್ಯಕವಾಗಿರುವ ಮೇಲ್ನೋಟಕ್ಕೆ ಕಾಣುವಂತೆ ಈ ಪ್ರಕರಣ ಇದೇ ಎಂದು ತೋರ್ಪಡಿಸಿರುತ್ತಾರೆ, ಮುಂದುವರೆದು ವಾದಿ/ಅರ್ಜಿದಾರರು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಹೊರಡಿಸಲು ಅವಶ್ಯಕವಾಗಿರುವ ಅನುಕೂಲತೆಯ ತುಲನೆ ತಮ್ಮ ಪರವಾಗಿದೆ ಎಂದು ಸಹ ತೋರ್ಪಡಿಸಿರುತ್ತಾರೆ, ವಾದಿ/ಅರ್ಜಿದಾರರು ಮೇಲ್ಕಂಡ ಎರಡು ಅಂಶಗಳನ್ನು ಮೇಲ್ನೋಟಕ್ಕೆ ಸಾಭೀತುಪಡಿಸಿರುವುದರಿಂದ ಅವರ ಪರ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಹೊರಡಿಸದಿದ್ದಲ್ಲಿ ಸರಿಪಡಿಸಲಾಗದ ನಷ್ಟ ಉಂಟಾಗುತ್ತದೆಂದು ಪರಿಗಣಿಸಲಾಗಿದೆ. ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ವಾದಿಯ ಪರ ತಾತ್ಕಾಲಿಕ ನಿರ್ಬಂಧಕಾಜ್ಞೆ ಪರಿಹಾರ ನೀಡುವುದು ಸೂಕ್ತ ಎಂದು ನ್ಯಾಯಾಲಯ ಅಭಿಪ್ರಾಯಕ್ಕೆ ಬಂದಿರುತ್ತದೆ. ಆ ಕಾರಣದಿಂದ ಅಂಶ 1 ರಿಂದ 3 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

9) <u>**ಅಂಶ.4 ಃ-**</u> ಮೇಲ್ಕಂಡ ಕಾರಣಗಳಿಂದ ಈ ಕೆಳಕಂಡಂತೆ ಆದೇಶಿಸುತ್ತೇನೆ.

**<u>ಃ ಆದೇಶ ಃ</u>**

ವಾದಿ ಸಿ.ಪ್ರ.ಸಂ. ಕ್ರಮಾದೇಶ **39** ನಿಯಮ **1** ಮತ್ತು **2** ರ ಅನ್ವಯ ಸಲ್ಲಿಸಿದ ಮಧ್ಯಂತರ ಅರ್ಜಿ.1 ನ್ನು ಅಂಗೀಕರಿಸಲಾಗಿದೆ.

ಪ್ರತಿವಾದಿಗಳು ಮತ್ತು ಅವರ ಪ್ರತಿನಿಧಿಗಳು ಈ ದಾವೆಯು ಇತ್ಯರ್ಥ ಆಗುವವರೆಗೂ ದಾವಾ ಸ್ವತ್ತುವಿನ ವಾದಿಯ ಸ್ವಾಧೀನಕ್ಕೆ ಅಡ್ಡಿಪಡಿಸದಂತೆ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶದ ಮೂಲಕ ನಿರ್ಬಂಧಿಸಿದೆ.

(**ಶೀಘ್ರಲಿಪಿಗಾರರಿಗೆ** ನೇರವಾಗಿ ಕಂಪ್ಯೂಟರಿಗೆ ಅಳವಡಿಸುವಂತೆ ಉಕ್ತಲೇಖನ ಕೊಟ್ಟಿದ್ದು, ನಂತರದಲ್ಲಿ ತೀರ್ಪನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ **ದಿನಾಂಕಃ 8 ನೇ ತಾರೀಖು ನವೆಂಬರ್ - 2022** ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ)

**(ಶ್ರೀ ಬಿ.ಕೇಶವಮೂರ್ತಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಬಂಗಾರಪೇಟೆ .

**(ಆದೇಶವನ್ನು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**

**<u>ಃಆದೇಶಃ</u>**

ವಾದಿ ಸಿ.ಪ್ರ.ಸಂ. ಕ್ರಮಾದೇಶ **39** ನಿಯಮ **1** ಮತ್ತು **2** ರ ಅನ್ವಯ ಸಲ್ಲಿಸಿದ ಮಧ್ಯಂತರ ಅರ್ಜಿ.1 ನ್ನು ಅಂಗೀಕರಿಸಲಾಗಿದೆ.

ಪ್ರತಿವಾದಿಗಳು ಮತ್ತು ಅವರ ಪ್ರತಿನಿಧಿಗಳು ಈ ದಾವೆಯು ಇತ್ಯರ್ಥ ಆಗುವವರೆಗೂ ದಾವಾ ಸ್ವತ್ತುವಿನ ವಾದಿಯ ಸ್ವಾಧೀನಕ್ಕೆ ಅಡ್ಡಿಪಡಿಸದಂತೆ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶದ ಮೂಲಕ ನಿರ್ಬಂಧಿಸಿದೆ.

ವಿವಾದಾಂಶ ರಚಿಸಲು ಪ್ರಕರಣವನ್ನು ದಿನಾಂಕ 12.12.2022 ಕ್ಕೆ ಮುಂದೂಡಲಾಗಿದೆ.

**(ಬಿ.ಕೇಶವಮೂರ್ತಿ)**
**ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್ಎಫ್‌ಸಿ.,**
**ಬಂಗಾರಪೇಟೆ**